


ಎಡದಿಂದ ಬಲಕ್ಕೆ:

1. ಭಯದಿಂದ ಶುರುವಾದರೂ ಮಂಗಳಕರ ಆರಂಭವೇ ಆಯಿತು (4)
3. ಕತ್ತೆಗಳನ್ನ ಸಾಕುವ ಕ್ರಮದ ನಿರೂಪಣೆ ಇದು (3)
4. ವಾಲಿಯ ಮುಖದಂತೆ ಗೆದ್ದಲ ಹುತ್ತ (3)
6. ಕದನದಲ್ಲಿ ದೋಚಿದ್ದೆಲ್ಲ ಕದ್ದು ಸಂಗ್ರಹಿಸಿದ್ದ ಹಣ (4)
7. ಆತಂಕಕ್ಕೆ ದಾರಿ ಮಾಡಿದ್ದು ಇದೇ ಸಹಿ (3)
9. ಕಂದಕ ತೋಡುವಾಗ ಸಿಕ್ಕಿದ್ದು ಇದೇ ಆಟದ ಚೆಂಡು (3)
11. ನುಂಗಲಾಗದು ಬಿಡಿ, ಇದು ನೀರ ದುಡ್ಡು (3)
13. ವಸ್ತುಸ್ಥಿತಿ ತಿಳಿಯದೆ ಕೊಂಡದ್ದು ಇದೇ ಮನೆಯೇ? (3)
15. ಅವರ ಅಂಗರಕ್ಷಕನಿಗೆ ಮಂಗಳ ಗ್ರಹದ ಹೆಸರು (4)
17. ಇಂಥ ಸಾಬೂನು ಸಿಕ್ಕಿದ್ದು ಅದೃಷ್ಟವೇ ಸರಿ (3)
18. ವಾರ್ತೆಯನ್ನು ಕೇಳಿದೊಡನೆ ಇದೆಂಥ ನಡವಳಿಕೆ? (3)
19. ಅವನ ಬಡತನಕ್ಕೆ ಕಾರಣ ಬರೀ ಸೋಮಾರಿತನ (4)

ಮೇಲಿಂದ ಕೆಳಕ್ಕೆ:

1. ಶೂರನ ಕನಸಿನಲ್ಲಿ ಕಂಡದ್ದು ಶ್ವಾನ (3)
2. ವ್ಯಾಯಾಮವನ್ನು ಕಲಿಯಲು ಬಂದಿದ್ದಾನೆ ವಿದೇಶೀಯ (3)
3. ಕಿಟಕಿ ತೆರೆದರೆ ಸಾಕು, ಚುಚ್ಚುಮಾತು (3)
5. ಕರೆದೊಡನೆ ಬಂದದ್ದು ಕಪ್ಪು ಬಣ್ಣದ್ದು (3)
7. ದಾನ ಪಡೆದೊಡನೆ ಆತ ಕಣ್ಮರೆಯಂತೆ? (4)
8. ದೊರೆತದ್ದು ಇನ್ನೇನಿಲ್ಲ, ಬರೀ ಪ್ರಯತ್ನ (4)
9. ಆ ಕಂಠಹಾರವನ್ನು ಧರಿಸಿ ಸಿಂಹದಂತಾದನೇ? (4)
10. ಮೂರು ಕತ್ತಿ ಮಾಯ ಮಾಡಿದ ಕೈ ಚಳಕ (4)
12. ಹಗೆತನದ ಮೂಲ ಕಾರಣ, ತುಂಬ ನಿಗೂಢ (3)
14. ಹೊಸದನ್ನೆಲ್ಲ ಹುಡುಕಲು ತಾಳ್ಮೆ ಬೇಕು (3)
15. ಅಂಜುಬುರುಕಳ ಕೈಯಲ್ಲಿ ತಾವರೆಯೇ? (3)
16. ನಾವಿಕನ ಕಲ್ಪನೆಯ ಸುಂದರ ಪದ್ಯ (3)

---

## ಪದಬಂಧ 21-7-2011ರ ಉತ್ತರಗಳು

ಎಡದಿಂದ ಬಲಕ್ಕೆ

1. ಅಧ್ವಾನ; 3. ವಿವಶ; 4. ವೀಳಯ; 6. ನಯನ; 7. ಹಿಮಾಲಯ; 9. ಆಸುಪಾಸು; 11. ಪಲಾಯನ; 13. ಲಗುಬಗೆ; 15. ಕಳಂಕ; 17. ನಾವಿಕ; 18. ಪಾತಕ, 19. ವಕೀಲ.

ಮೇಲಿಂದ ಕೆಳಕ್ಕೆ

1. ಅಶನ; 2. ನವೀನ; 3. ವಿರಲ (=ವಿರಳ); 5. ಯತ್ನಿಸು; 7. ಹಿಡಿಶಾಪ; 8. ಯಜಮಾನ; 9. ಆದಿಕಾಲ; 10. ಸುಪ್ಪತ್ತಿಗೆ; 12. ಯಮುನಾ; 14. ಗುಣಕ; 15. ಕಕವ, 16. ಕಪಾಲ.

# ಪ್ರಾಣಿ ಪ್ರಪಂಚ

## ಮುಳ್ಳು ದೆವ್ವ - ಅದೇನು?

'ಶರೀರದ ತುಂಬ ಗಂಟು ಗಂಟು. ಗುಮ್ಮಟದಂಥ ಪ್ರತಿ ಗಂಟಿನ ಮೇಲೂ ಚೂಪು ಚೂಪು ಮುಳ್ಳುಗಳು. ವಿಕಾರ ರೂಪ, ಅಲೌಕಿಕ ಸ್ವರೂಪ' – ಇಂಥ ಲಕ್ಷಣಗಳ ಪ್ರಾಣಿಯೊಂದಿದೆ. ಅದರ ರೂಪಾನ್ವಯ ಹೆಸರೇ 'ಥಾರ್ನೀ ಡೆವಿಲ್'. ಹಾಗೆಂದರೆ 'ಮುಳ್ಳು ದೆವ್ವ'! (ಚಿತ್ರ ನೋಡಿ)

ವಾಸ್ತವವಾಗಿ ಥಾರ್ನೀ ಡೆವಿಲ್ ಒಂದು ಹಲ್ಲಿ. ಅದೂ ತುಂಬ ಸಾಮಾನ್ಯ ಉದ್ದದ–ಗಾತ್ರದ ಹಲ್ಲಿ. ಆಸ್ಟ್ರೇಲಿಯದ ಮರುಭೂಮಿಯಲ್ಲಿ ಅದರ ವಾಸ. ಎಲ್ಲ ಹಲ್ಲಿಗಳಂತೆಯೇ ಅದರದೂ ಗಟ್ಟಿ 'ಕೆರಟಿನ್'ನಿಂದಾದ ಚಕ್ಕೆ ಚಕ್ಕೆ ಚರ್ಮ. ಮುಳ್ಳು ದೆವ್ವದಲ್ಲಿ ಈ ಚರ್ಮ ವಿಲಕ್ಷಣ ರೂಪದಲ್ಲಿ ಇಡೀ ಮೈಯನ್ನು ಆವರಿಸಿದೆ; ಭಯಂಕರ ಸ್ವರೂಪವನ್ನು ಒದಗಿಸಿದೆ; ಸುಭದ್ರ ರಕ್ಷಣಾ ಕವಚ ತೊಡಿಸಿದೆ ಕೂಡ. ಮನುಷ್ಯರಿಗೆ ಮುಳ್ಳು ದೆವ್ವದಂತೆ ಕಾಣುವ ಈ ಹಲ್ಲಿ ಬೇಟೆಗಾರ ಪ್ರಾಣಿಗಳಿಗೆ ಭೀಕರ ಆಹಾರವಾಗಿ ಕಾಣಿಸುತ್ತದೆ. ಯಾವುದೇ ಹಕ್ಕಿಯಾಗಲೀ ಇನ್ನಾವುದೇ ಪ್ರಾಣಿಯಾಗಲೀ ಮುಳ್ಳು ದೆವ್ವವನ್ನು ಹಿಡಿವ ದುಸ್ಸಾಹಸಕ್ಕಿಳಿಯುವುದಿಲ್ಲ; ಹಿಡಿಯ ಹೋಗಿ ಬಾಯಿ ನಾಲಿಗೆ ಗಂಟಲು ಹರಿದುಕೊಳ್ಳಬಯಸುವುದಿಲ್ಲ.

ವಿಸ್ಮಯ ಏನೆಂದರೆ ಮುಳ್ಳು ಹಂದಿ, ಎಖಿಡ್ನಾಗಳಂತಹ ಕೆಲವೇ ಸ್ತನಿ ಪ್ರಭೇದಗಳಷ್ಟೇ ಪಡೆದಿರುವ ಮುಳ್ಳು ತುಂಬಿದ ದೇಹ ರಕ್ಷಕ ಕವಚ



ಸರೀಸೃಪಗಳ ಅದರಲ್ಲೂ ಹಲ್ಲಿಗಳ ಬಹು ಪ್ರಭೇದಗಳಲ್ಲಿ ನಿಸರ್ಗದತ್ತವಾಗಿದೆ. 'ಮುಳ್ಳಿನ ಹಲ್ಲಿಗಳು' ಎಂದೇ ವರ್ಗೀಕರಿಸಲಾಗಿರುವ ಅಂಥ ಸಕಲ ಹಲ್ಲಿಗಳಲ್ಲೂ ಥಾರ್ನೀ ಡೆವಿಲ್ ತುಂಬ ವಿಶಿಷ್ಟ. ಗಂಟುಗಳು ಹರಡಿದ, ಮುಳ್ಳುಗಳು ತುಂಬಿದ, ಬೆಚ್ಚಿಸುವ ರೂಪದ ಈ ಹಲ್ಲಿ ಬೇರಾವ ಪ್ರಭೇದವನ್ನೂ ವೈಲಕ್ಷಣ್ಯಗಳಲ್ಲಿ ಹೋಲುವುದಿಲ್ಲ.

ಮತ್ತೊಂದು ಅದ್ಭುತ ಏನೆಂದರೆ ಥಾರ್ನೀ ಡೆವಿಲ್ ಈ ಘೋರ ಚರ್ಮದುಡುಗೆಯಿಂದ ಮತ್ತೊಂದು ಅನೂಹ್ಯ ಪ್ರಯೋಜನವನ್ನು ಪಡೆದಿದೆ. ಆಸ್ಟ್ರೇಲಿಯಾದ ಮರುಭೂಮಿಗಳಲ್ಲಿ ಇರುಳಿನಲ್ಲಿ ಇಬ್ಬನಿಯ ಕಣಗಳು ಈ ಹಲ್ಲಿಯ ಚರ್ಮದ ತಗ್ಗುಗಳಲ್ಲಿ ಸಂಗ್ರಹಗೊಂಡು ನೀರಹನಿಗಳಾಗಿ ಸಂಗಮಗೊಳ್ಳುತ್ತವೆ. ಹಾಗಾದಾಗಲೆಲ್ಲ ಮುಳ್ಳುದೆವ್ವ ಬಾಲವನ್ನು ಎತ್ತಿಹಿಡಿದು ಇಳಿಜಾರಾಗಿ ನಿಲ್ಲುತ್ತದೆ. ಚರ್ಮದ ಗಂಟುಗಳ ಸಾಲುಗಳ ನಡುವೆ ಬಾಲದ ತುದಿಯಿಂದ ಬಾಯಿಯವರೆಗೆ ಹಬ್ಬಿರುವ 'ನಾಲೆ'ಗಳ ಮೂಲಕ ನೀರ ಹನಿಗಳೆಲ್ಲ ಬಾಯಿಗೆ ಹರಿದುಬರುತ್ತವೆ. ಥಾರ್ನೀ ಡೆವಿಲ್‌ಗೆ ನೀರು ಲಭಿಸುವುದೇ ಹೀಗೆ.

ರೂಪ ಹೇಗೇ ಇದ್ದರೂ ಮುಳ್ಳುದೆವ್ವ ತುಂಬ ಸೌಮ್ಯ ಸ್ವಭಾವದ ಪ್ರಾಣಿ. ಅದರ ಏಕೈಕ ಆಹಾರವಾದ ಕಪ್ಪು ಇರುವೆಗಳನ್ನು ನುಂಗಿ ತೆಪ್ಪಗಿರುವುದಷ್ಟೇ ಅದರ ಜೀವನ ಕ್ರಮ. ಎಂಥ ಪ್ರಾಣಿ!

■ ಎನ್. ವಾಸುದೇವ್